# ಆಹಾ ಸುದ್ದಿ!

★ ಸಸಿತೋಟ

ಮೊದಲು ಬಿಯರ್ ಯೋಗ, ಡಾಗ್ ಯೋಗ, ಗೋಟ್ ಯೋಗ.. ಎಲ್ಲವೂ ಮುಗಿದು ಈಗ ಗೋಡೆ ಹತ್ತುತ್ತ ಮಾಡುವ ಯೋಗ ಮ್ಯಾನ್ಮಾರ್‌ನಲ್ಲಿ ಫಿಟ್ನೆಸ್ ಪ್ರಿಯರಿಗೆ ಹುಚ್ಚು ಹಿಡಿಸಿದೆಯಂತೆ. ಗೋಡೆ ಏರುತ್ತಲೇ ದೇಹವನ್ನು ಬಾಗಿ ಬಳುಕಿಸುವ ಇದಕ್ಕೆ ಇನ್ನೂ ಅಧಿಕೃತ ಹೆಸರು ಸಿಕ್ಕಿಲ್ಲವಂತೆ. ಅಷ್ಟರಲ್ಲಿ ಈ ಯೋಗಕ್ಕೂ ಬೈ ಹೇಳಿ ಗೋಡೆ ಇಳಿಯುವ ಯೋಗದ ಕ್ರೇಜ್ ಶುರುವಾಗಬಹುದು.



ಸ್ವಿಟ್ಜರ್ಲೆಂಡ್‌ನಲ್ಲಿ ಕಳೆದ ವರ್ಷ ಮೋರಿಯಲ್ಲಿನ ತ್ಯಾಜ್ಯದಲ್ಲಿ 3 ಟನ್ ಬೆಳ್ಳಿ, 43 ಕೆಜಿ ಚಿನ್ನ ಪತ್ತೆಯಾಗಿದೆಯಂತೆ. ಅಲ್ಲಿಯ ಕೈಗಡಿಯಾರ, ಔಷಧ ಕಾರ್ಖಾನೆಯಲ್ಲಿ ಈ ಅಮೂಲ್ಯ ಲೋಹಗಳ ಬಳಕೆ ಜಾಸ್ತಿಯಾಗಿದ್ದು, ತ್ಯಾಜ್ಯದ ಜೊತೆ ಸಂಸ್ಕರಣ ಘಟಕ ಸೇರಿ ಅಲ್ಲಿ ಸಂಸ್ಕರಣೆ ಮಾಡಲಾಗಿದೆಯಂತೆ. ಸಿರಿವಂತರ ದೇಶದಲ್ಲಿ ಚಿಂದಿ ಆಯುವವರೂ ಸಿರಿವಂತರೇ!



ಚೀನಾದ ಈ ಸುಂದರಿ ಅತ್ಯಂತ ಸಂಕೀರ್ಣವಾದ ಕೇಶ ವಿನ್ಯಾಸ ಮಾಡಿಕೊಂಡ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಆಕೆ ಮಲಗಿದ ಕೂಡಲೇ ಈ ವಿನ್ಯಾಸ ಸೃಷ್ಟಿಯಾಗುತ್ತದೆ ಎಂದು ಮೂಗಿನ ಮೇಲೆ ಬೆರಳಿಟ್ಟವರು ಬಹಳ ಮಂದಿ. ಆದರೆ ಆ ವಿಡಿಯೋವನ್ನು ರಿವರ್ಸ್ ಆಗಿ ಓಡಿಸಿ ಜಾಲತಾಣಕ್ಕೆ ಪೇಸ್ಟ್ ಮಾಡಲಾಗಿದೆಯಂತೆ. ಚೀನಿಯರ ತಲೆ ಇಲ್ಲಿಯೂ ಕೆಲಸ ಮಾಡಿದೆ.

ಕೆನ್ಯಾದಲ್ಲಿ ಯಾವುದೆ ಪ್ರತಿಭಟನೆ ನಡೆಯಲಿ, ಕಿತ್ತಳೆ ಹಣ್ಣುಗಳ ಮಾಲೆ ಪ್ರತಿಭಟನಾ ನಿರತರ ಕೊರಳ ಸುತ್ತ ಕಾಯಂ ಅಂತೆ. ನಮ್ಮಲ್ಲಿಯೂ ಕಿತ್ತಳೆ ಹಣ್ಣಿನ ಬಳಕೆ ಬಹಳ. ಯಾರ ವಿರುದ್ಧ ಪ್ರತಿಭಟನೆ ನಡೆಸುತ್ತೇವೆಯೋ ಅವರ ಮೇಲೆ ಕಿತ್ತಳೆ ಹಣ್ಣುಗಳ ಸುರಿಮಳೆ, ಕೊಳೆತ ಹಣ್ಣುಗಳಿಗೆ ಪ್ರಾಶಸ್ತ್ಯ ಅಷ್ಟೆ. ಅಷ್ಟರಮಟ್ಟಿಗೆ ದುಂದುವೆಚ್ಚಕ್ಕೆ ಕಡಿವಾಣ.



ಅಮೆರಿಕದಲ್ಲಿ ಯುವತಿಯೊಬ್ಬಳು ಸಾಕಿದ ನಾಯಿಮರಿ ತನ್ನ ಒಡತಿಯ ಬ್ಯಾಗಿನಿಂದ ಹಣ ಕದಿಯುವ ಅಭ್ಯಾಸ ಮಾಡಿಕೊಂಡಿದೆಯಂತೆ. ಅದು ಹಣ ಕದ್ದು ಬಾಯಿಯಲ್ಲಿ ಕಚ್ಚಿಕೊಂಡು ಆಟ ಆಡಿಸಿದಾಗಲೆಲ್ಲ ನಾಯಿಯ ಒಡತಿ ತಿಂಡಿ ಕೊಟ್ಟು ಲಂಚದ ಅಭ್ಯಾಸ ಮಾಡಿದ್ದಾಳಂತೆ. ಲಂಚ ತಿನ್ನುವ ಚಟ ನಾಯಿಗೂ ಅಂಟಿಬಿಟ್ಟಿದೆ ನೋಡಿ.



ಪಶ್ಚಿಮ ಆಫ್ರಿಕಾದಲ್ಲಿ ರಾಷ್ಟ್ರೀಯ ಕೊಕೊವ ಹಾಗೂ ಚಾಕೊಲೇಟ್ ದಿನಾಚರಣೆಯಂದು ಪುರುಷರು ಈ ಸಾಂಪ್ರದಾಯಕ ಮಹಿಳೆಯರ ಉಡುಗೆ ಧರಿಸುತ್ತಾರಂತೆ. ಹಿನ್ನೆಲೆ ಏನೇ ಇರಲಿ, ಲಾಗಾಯ್ತಿನಿಂದಲೂ ಮಹಿಳಾ ವಾದ ಕೊಂಚ ಕೆಲಸ ಮಾಡಿರಬಹುದು.